ಭಗವಂತ ಮತ್ತು ಜಗತ್ತು

❁ ಭಗವಂತನ ಸೃಷ್ಟಿಯಲ್ಲಿ ಎಲ್ಲವೂ ಸಾಧ್ಯ ಎಂಬ ಶ್ರದ್ಧೆಯೊಂದಿದ್ದರೆ ಬೇಕಾದಷ್ಟು. ನಿನ್ನ ಭಾವನೆಗಳೇ ಸತ್ಯವಾದುವು, ಉಳಿದವರ ದೆಲ್ಲಾ ಅಸತ್ಯವಾದುವು ಎಂಬ ಭಾವನೆ ನಿನ್ನ ಮನಸ್ಸಿನ ಹೊಸ್ತಿಲನ್ನೇ ಹತ್ತದಿರಲಿ. ಬಳಿಕ ಆತನೇ ಎಲ್ಲವನ್ನು ತಿಳಿಸಿಕೊಡುತ್ತಾನೆ.

❁ ಭಗವಂತನ ಕೆಲಸಕಾರ್ಯಗಳನ್ನು ಮನುಷ್ಯ ಅರಿಯುವ ಬಗೆ ಹೇಗೆ? ಅವಕ್ಕೆ ಮಿತಿ ಎಂಬುದೇ ಇಲ್ಲ. ಆದ್ದರಿಂದ ಇದನ್ನು ನಾನು ಅರಿತುಕೊಳ್ಳಲು ಸ್ವಲ್ಪವೂ ಪ್ರಯತ್ನ ಮಾಡುವುದಿಲ್ಲ. ಆತನ ಸೃಷ್ಟಿಯಲ್ಲಿ ಎಲ್ಲವೂ ಸಾಧ್ಯ ಎಂಬುದನ್ನು ಕೇಳಿ, ಅದನ್ನು ಹೃದಯದಲ್ಲಿ ಚಿರಮುದ್ರಿತವನ್ನಾಗಿ ಮಾಡಿಕೊಂಡಿದ್ದೇನೆ. ಆದ್ದರಿಂದ ನಾನು ಆತನ ಸೃಷ್ಟಿಯ ಸಂಬಂಧವಾಗಿ ಒಂದು ಸ್ವಲ್ಪವೂ ಚಿಂತಿಸದೆ ಆತನ ಸಂಬಂಧವಾಗಿಯೇ ಚಿಂತಿಸುತ್ತಿದ್ದೇನೆ. ಒಮ್ಮೆ ಹನುಮಂತನಿಗೆ ಯಾರೋ ಪ್ರಶ್ನೆ ಹಾಕಿದರು: 'ಈ ದಿನ ಯಾವ ತಿಥಿ?' ಎಂಬುದಾಗಿ. ಆತ ಹೇಳಿದ: 'ನನಗೆ ತಿಥಿ, ವಾರ, ನಕ್ಷತ್ರ ಯಾವುದೂ ಗೊತ್ತಿಲ್ಲ ; ನಾನು ಕೇವಲ ರಾಮಚಿಂತನೆಯನ್ನು ಮಾತ್ರ ಮಾಡುತ್ತಿದ್ದೇನೆ.'

❁ ಭಗವಂತನ ಚೇತನದಿಂದ ಈ ಜಗತ್ತು ಚೇತನಮಯವಾಗಿದೆ. ಒಮ್ಮೊಮ್ಮೆ ಕಾಣಬರುತ್ತದೆ, ಚಿಕ್ಕಪುಟ್ಟ ಮೀನುಗಳಲ್ಲೂ ಅದೇ ಚೇತನ ಕಿಲಕಿಲ ಅನ್ನುತ್ತಿರುವುದು.

❁ ಒಮ್ಮೊಮ್ಮೆ ನನಗೆ ಕಾಣಬರುತ್ತದೆ, ಯಾವ ರೀತಿಯಾಗಿ ಮಳೆಗಾಲದಲ್ಲಿ ಭೂಮಿ ಜಲಮಯವಾಗಿ ಕಾಣುವುದೋ ಅದೇ ರೀತಿಯಾಗಿ ಜಗತ್ತು ಚೈತನ್ಯಮಯವಾಗಿರುವಂತೆ.

❁ ಎಲ್ಲರಿಗೂ ಭಗವಂತನನ್ನು ಗ್ರಹಿಸಲು ಸಾಧ್ಯವೆ? ಆತ ಒಳ್ಳೆಯವರು, ಕೆಟ್ಟವರು, ಭಕ್ತರು, ಅಭಕ್ತರು, ವಿಶ್ವಾಸಿ, ಅವಿಶ್ವಾಸಿ – ಎಲ್ಲರನ್ನೂ ಸೃಷ್ಟಿಸಿದ್ದಾನೆ. ಆತನ ಸೃಷ್ಟಿಯಲ್ಲಿ ಈ ವೈಚಿತ್ರ್ಯವೆಲ್ಲಾ ಇದೆ. ಆತನ ಶಕ್ತಿ ಕೆಲವದರಲ್ಲಿ ಅಧಿಕವಾಗಿ, ಇನ್ನು ಕೆಲವದರಲ್ಲಿ ಕಡಿಮೆಯಾಗಿ ವ್ಯಕ್ತವಾಗಿದೆ. ಸೂರ್ಯನ ಬೆಳಕು ಮಣ್ಣಿಗಿಂತ ನೀರಿನಲ್ಲಿ ಹೆಚ್ಚಾಗಿ ಪ್ರತಿಬಿಂಬಿತವಾಗುತ್ತದೆ; ಕನ್ನಡಿಯಲ್ಲಿ ಇನ್ನೂ ಅಧಿಕವಾಗಿ. ಹಾಗೆಯೇ ಭಕ್ತರಲ್ಲೂ ವಿವಿಧ ಅಂತಸ್ತಿನವರಿದ್ದಾರೆ.

❁ ಯೋಗಮಾಯೆ ಎಂದರೆ ಪ್ರಕೃತಿ–ಪುರುಷರ ಸಂಯೋಗ. ಈ ಜಗತ್ತಿನಲ್ಲಿ ಏನೇನು ಕಣ್ಣಿಗೆ ಬೀಳುವುವೋ ಅವೆಲ್ಲವೂ ಈ ಸಂಯೋಗದಿಂದ ಉದ್ಭವವಾದುವು. ಉದಾಹರಣೆಗೆ ಶಿವಕಾಳಿಯರ ಮೂರ್ತಿ ತೆಗೆದುಕೊ. ಕಾಳಿ ಶಿವನ ಮೇಲೆ ನಿಂತುಕೊಂಡಿದ್ದಾಳೆ. ಶಿವ ಶವದ ಹಾಗೆ ಆಕೆಯ ಪಾದದ ಕೆಳಗೆ ಬಿದ್ದುಕೊಂಡಿದ್ದಾನೆ. ಕಾಳಿ ಆತನ ಕಡೆಗೆ ದೃಷ್ಟಿಸಿ ನೋಡುತ್ತಿದ್ದಾಳೆ. ಇವೆಲ್ಲವೂ ಪುರುಷ ಪ್ರಕೃತಿಯರ ಸಂಯೋಗವನ್ನು ಸೂಚಿಸುತ್ತದೆ. ಪುರುಷ ನಿಷ್ಕ್ರಿಯ; ಅದಕ್ಕಾಗಿಯೇ ಶಿವ ಶವದ ಹಾಗೆ ನೆಲದ ಮೇಲೆ ಬಿದ್ದಿದ್ದಾನೆ. ಪುರುಷನ ಸಂಯೋಗದಿಂದ ಪ್ರಕೃತಿ ತನ್ನ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡುತ್ತಾಳೆ, ಸೃಷ್ಟಿ–ಸ್ಥಿತಿ–ಪ್ರಳಯ ಕಾರ್ಯಗಳನ್ನು ಮಾಡುತ್ತಾಳೆ.

❁ ಉತ್ತಮ ಭಕ್ತ ಯಾರು ಗೊತ್ತೆ? ಯಾರು ಬ್ರಹ್ಮಜ್ಞಾನವನ್ನು ಪಡೆದುಕೊಂಡ ನಂತರ ಭಗವಂತನೇ ಈ ಜೀವ, ಜಗತ್ತು, ಚತುರ್ವಿಂಶತಿ ತತ್ತ್ವ ಆಗಿದ್ದಾನೆ ಎಂಬುದಾಗಿ ನೋಡುತ್ತಾನೋ ಆತ. ಮೊದಲು 'ನೇತಿ', 'ನೇತಿ', 'ಇದಲ್ಲ', 'ಇದಲ್ಲ' ಎಂದು ವಿಚಾರ ಮಾಡಿ ಚಾವಣಿಯನ್ನು ಮುಟ್ಟಬೇಕು. ಆಗ ಆತನಿಗೆ ಗೊತ್ತಾಗುತ್ತದೆ, ಚಾವಣಿ ಯಾವುದರಿಂದ – ಇಟ್ಟಿಗೆ, ಸುಣ್ಣ, ಇಟ್ಟಿಗೆಪುಡಿ – ತಯಾರಾಗಿದೆಯೋ ಅದೇ ವಸ್ತುಗಳಿಂದ ಮೆಟ್ಟಿಲ ಸಾಲೂ ತಯಾರಾಗಿದೆ ಎಂಬುದಾಗಿ. ಆಗ ಆತನಿಗೆ ತೋರಿಬರುತ್ತದೆ, ಬ್ರಹ್ಮನೇ ಜೀವ ಜಗತ್ತು ಸಮಸ್ತವೂ ಆಗಿದ್ದಾನೆ ಎಂಬುದಾಗಿ.

❁ ನಿತ್ಯ ಯಾರದೋ ಆತನದೇ ಲೀಲೆ. ಲೀಲೆ ಯಾರದೋ ಆತನದೇ ನಿತ್ಯ. ಯಾರು ಈಶ್ವರನಾಗಿ ವ್ಯಕ್ತವಾಗಿದ್ದಾನೊ, ಆತನೇ ಈ ಜೀವಜಗತ್ತಾಗಿ ವ್ಯಕ್ತವಾಗಿದ್ದಾನೆ. ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೊ, ಆತನಿಗೇ ಗೊತ್ತಿದೆ ಆತನೇ ಸಮಸ್ತವೂ, ಎಂದರೆ ತಾಯಿ, ತಂದೆ, ಮಗು, ನೆರೆಯವ, ಜೀವಜಂತು, ಒಳ್ಳೆಯದು ಕೆಟ್ಟದ್ದು, ಶುಚಿ, ಅಶುಚಿ, ಇತ್ಯಾದಿ ಆಗಿದ್ದಾನೆ ಎಂಬುದಾಗಿ.

❁ ಜೀವ ಜಗತ್ತನ್ನು ಬ್ರಹ್ಮನಿಂದ ಹೊರಹಾಕುವುದು ಹೇಗೆ? ಹಾಗೆ ಮಾಡಿದರೆ ತೂಕ ಕಡಮೆಯಾಗಿಬಿಡುತ್ತದೆ. ಬೇಲದ ಹಣ್ಣಿನ ಬೀಜ ಮತ್ತು ಕರಟವನ್ನು ಹೊರಕ್ಕೆ ಬಿಸಾಡಿಬಿಟ್ಟರೆ ಬೇಲದ ಹಣ್ಣಿನ ನಿಜವಾದ ತೂಕ ದೊರೆಯುವುದಿಲ್ಲ.

❁ ಭಗವಂತನ ದರ್ಶನವಾದನಂತರ ಬೋಧೆಯಾಗುತ್ತದೆ, ಆತನೇ ಜೀವ ಜಗತ್ತು ಆಗಿರುವುದಾಗಿ. ಭಗವತಿ ನನಗೆ ಕಾಳೀ ದೇವಾಲಯದಲ್ಲಿ ತೋರಿಸಿದಳು, ತಾನೇ ಎಲ್ಲವೂ ಆಗಿರುವುದಾಗಿ. ತೋರಿಸಿದಳು, ಎಲ್ಲವೂ ಚಿನ್ಮಯವಾಗಿರುವುದನ್ನು. ಪ್ರತಿಮೆ ಚಿನ್ಮಯವಾಗಿ, ವೇದಿ ಚಿನ್ಮಯವಾಗಿ ಕಂಡವು.

ಶ್ರೀರಾಮಕೃಷ್ಣ ವಚನವೇದದಿಂದ